ಎನ್ನುತ್ತಾ ಎದ್ದು ನಿಂತನವ ಕೈ ಹಿಡಿದು ಜಗ್ಗಿ ಮತ್ತೆ ಕೂರಿಸುತ್ತಾ, 'ನೀನೀ ಮಾತನ್ನು ಸಂತೋಷದಿಂದ ಹೇಳ್ತಿದೆಯಾದ್ರೆ ನಾನು ಅದೇ ಹುಡುಗನ್ನ ಮದುವೆ ಮಾಡಿಕೊಳ್ಳುತ್ತಿದ್ದೆ. ನೀನು ಸಂತೋಷದಿಂದ ಹೇಳ್ತಿಲ್ಲ ಅನ್ನಿಸುತ್ತಿದೆ' ಅಂದಳು. 'ನನ್ನ ಸಂತೋಷ ತಗೊಂಡು ಏನಾಗಬೇಕಿದೆ ರೋಸ್! ನಿನ್ನ ಬದುಕು ಭವಿಷ್ಯ ಮುಖ್ಯ ಅಲ್ವ? ಆಫ್ಟ್ರಾಲ್ ನಾನೊಬ್ಬ ಬ್ಯಾಂಕ್ ಉದ್ಯೋಗಿ. ಡಾಲರ್‌ಗಳಲ್ಲಿ ಸಂಬಳ ಪಡೆಯುವ ವಿದ್ಯೆ, ಉದ್ಯೋಗ ನನಗಿಲ್ಲ. ನಿನ್ನಂತಹ ರಾಜಕುಮಾರಿಗೆ... ನಾನೆಷ್ಟು ಮಾತ್ರಕ್ಕೂ ಯೋಗ್ಯ ಅಲ್ಲ ಅಂತ ನಂಗೊತ್ತು. ಆದ್ದರಿಂದ ನಾನು ಇಲ್ಲೀವರೆಗೂ ನಿಂಗೆ ಪ್ರಪೋಸ್ ಮಾಡಿಲ್ಲ' ಅಂದ ಗಾರುಗಾರಾದ ಅಳು ಧ್ವನಿಯಲ್ಲಿ. 'ಅದೇನು ದೊಡ್ಡ ವಿಷಯವಲ್ಲ ಮೂರ್ತಿ, ನನ್ನಪ್ಪನೂ ಬ್ಯಾಂಕರ್, ನಮಗೆ ಯಾವತ್ತೂ ಏನಕ್ಕೂ ಕಮ್ಮಿಯಾಗದಂತೆ ನೋಡಿಕೊಂಡಿದ್ದಾರವರು. ನನ್ನ ಇಶ್ಯು ಇರೋದು ಬೇರೆ ವಿಷಯಕ್ಕೆ' ಅಂದಳು ತಗ್ಗಿದ ದನಿಯಲ್ಲಿ.

